# ಕರ್ನಾಟಕ ವಿಧಾನ ಪರಿಷತ್ತು

1 ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 812
2 ಸದಸ್ಯರ ಹೆಸರು : ಶ್ರೀ ಅ. ದೇವೇಗೌಡ (ಪದವೀಧರರ ಕ್ಷೇತ್ರ)
3 ಉತ್ತರಿಸಬೇಕಾದ ದಿನಾಂಕ : 13.07.2023
4 ಉತ್ತರಿಸುವ ಸಚಿವರು : ಗೃಹ ಸಚಿವರು

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ಪೊಲೀಸ್ ಇನ್ಸ್‌ಪೆಕ್ಟರ್, ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಹಾಗೂ ಪೊಲೀಸ್ ಕಾನ್ಸ್‌ಟೇಬಲ್ ರವರುಗಳಿಗೆ ವಾರದ ರಜೆಯನ್ನು ನೀಡಲಾಗುತ್ತಿದೆಯೆ: | ಪ್ರಸ್ತುತ ಪೊಲೀಸ್ ಕಾನ್ಸ್‌ಟೇಬಲ್ ಮತ್ತು ಹೆಡ್ ಕಾನ್ಸ್‌ಟೇಬಲ್ ವೃಂದದ ಸಿಬ್ಬಂದಿಗಳಿಗೆ ಮಾತ್ರ ವಾರದ ರಜೆಯನ್ನು ನೀಡಲಾಗುತ್ತಿದೆ. |
| ಆ. | ಇತ್ತೀಚಿನ ದಿನಗಳಲ್ಲಿ ಕೆಲಸದ ಒತ್ತಡದಿಂದಾಗಿ ಸಿಬ್ಬಂದಿ ವರ್ಗದವರ ಆರೋಗ್ಯ ಕೆಡುತ್ತಿದ್ದು ಹಾಗೂ ಸೇವೆಯಲ್ಲಿರುವಾಗಲೇ ಮೃತ ಹೊಂದುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ: ಹಾಗಿದ್ದಲ್ಲಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು: | ಇತ್ತೀಚಿನ ದಿನಗಳಲ್ಲಿ ಕೆಲಸದ ಒತ್ತಡದಿಂದಾಗಿ ಸಿಬ್ಬಂದಿ ವರ್ಗದವರು ಸೇವೆಯಲ್ಲಿರುವಾಗಲೇ ಮೃತಪಟ್ಟ ಯಾವುದೇ ಪ್ರಕರಣಗಳು ಇರುವುದಿಲ್ಲ.<br>ಕೆಲಸದ ಒತ್ತಡ ಕಡಿಮೆ ಮಾಡಲು ಪೊಲೀಸ್ ಕಾನ್ಸ್‌ಟೇಬಲ್ ಮತ್ತು ಹೆಡ್ ಕಾನ್ಸ್‌ಟೇಬಲ್‌ಗಳಿಗೆ ಕಡ್ಡಾಯವಾಗಿ ವಾರದ ರಜೆ ನೀಡಲಾಗುತ್ತಿದೆ. ಅಧಿಕಾರಿ, ಸಿಬ್ಬಂದಿಗಳಿಗೆ ವಾರ್ಷಿಕ ಆರೋಗ್ಯ ತಪಾಸಣೆ ನಡೆಸಲಾಗುತ್ತಿದೆ, ಹಾಗೂ ಅನಾರೋಗ್ಯಕ್ಕೆ ಒಳಗಾದಲ್ಲಿ ಆರೋಗ್ಯ ಭಾಗ್ಯ ಯೋಜನೆಯಡಿ ಚಿಕಿತ್ಸೆಯನ್ನು ನೀಡಲಾಗುತ್ತಿದೆ.<br>ಗುತ್ತಿಗೆ ಆಧಾರದ ಮೇಲೆ ಸಮಾಲೋಚಕರನ್ನು ನಗರ/ಜಿಲ್ಲಾ ಘಟಕಗಳಲ್ಲಿ ನೇಮಿಸಲಾಗಿದ್ದು, ಸದರಿಯವರಿಂದ ಪೊಲೀಸ್ ಅಧಿಕಾರಿ/ಸಿಬ್ಬಂದಿಗಳಿಗೆ ಮಾನಸಿಕ ಒತ್ತಡ ಹಾಗೂ ಖಿನ್ನತೆಯ ಬಗ್ಗೆ ಠಾಣಾವಾರು ಸಮಾಲೋಚನೆ ನಡೆಸಿ ಸೂಕ್ತ ಸಲಹೆ ಮತ್ತು ಚಿಕಿತ್ಸೆಯನ್ನು ಕೊಡಿಸಲಾಗುತ್ತಿರುತ್ತದೆ. |
| ಇ. | ಪೊಲೀಸ್ ಸಿಬ್ಬಂದಿ ವರ್ಗದವರಿಗೆ ಸಮವಸ್ತ್ರಗಳ ಬದಲಾವಣೆ ಮಾಡುವ ಪ್ರಸ್ತಾವನೆ ಸರ್ಕಾರದ ಹಂತದಲ್ಲಿಯೇ: | ಪ್ರಸ್ತುತ ಪೊಲೀಸ್ ಸಿಬ್ಬಂದಿ ವರ್ಗದವರಿಗೆ ಸಮವಸ್ತ್ರ ಬದಲಾವಣೆ ಮಾಡುವ ಯಾವುದೇ ಪ್ರಸ್ತಾವನೆ ಇರುವುದಿಲ್ಲ. |
| ಈ. | ರಾಜ್ಯ ವಸತಿ ಪೊಲೀಸ್ ನಿಗಮ ನಿಯಮಿತ ವತಿಯಿಂದ ವಸತಿ ಮತ್ತು ನಿವೇಶನ ಯೋಜನೆಯಡಿ ಎಷ್ಟು ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರಿಗೆ ವಸತಿ ಮತ್ತು ನಿವೇಶನಗಳನ್ನು ಹಂಚಲಾಗಿದೆ? | ಕರ್ನಾಟಕ ರಾಜ್ಯ ಪೊಲೀಸ್ ವಸತಿ ನಿಗಮ ನಿಯಮಿತ ವತಿಯಿಂದ ವಸತಿ ಯೋಜನೆಯಡಿ ಈ ಕೆಳಕಂಡ ಯೋಜನೆಗಳಡಿಯಲ್ಲಿ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ವಸತಿ ಗೃಹಗಳನ್ನು ನಿರ್ಮಿಸಿ ಹಂಚಿಕೆ ಮಾಡಲಾಗಿರುತ್ತದೆ. |

**ಹುಡ್ಕೋ ಯೋಜನೆ: (1995 ರಿಂದ 1999)**

ಹುಡ್ಕೋ ಯೋಜನೆಯಡಿ 3 ಹಂತಗಳಲ್ಲಿ ಒಟ್ಟು 2863 ವಸತಿಗೃಹಗಳು ಅದರಲ್ಲಿ 2690 ಸಿಬ್ಬಂದಿ (ಪಿಸಿ) ವಸತಿಗೃಹಗಳು ಹಾಗೂ 173 ಅಧಿಕಾರಿ (ಎಸ್‌ಐ) ವಸತಿಗೃಹಗಳನ್ನು ನಿರ್ಮಿಸಿ ಹಂಚಿಕೆ ಮಾಡಲಾಗಿದೆ.

**ತ್ವರಿತ ವಸತಿ ಯೋಜನೆ: (1999 ರಿಂದ 2014)**

ತ್ವರಿತ ವಸತಿ ಯೋಜನೆಯಡಿ 3 ಹಂತಗಳಲ್ಲಿ ಒಟ್ಟು 13119 ವಸತಿಗೃಹಗಳು ಅದರಲ್ಲಿ 11944 ಸಿಬ್ಬಂದಿ (ಪಿಸಿ) ವಸತಿಗೃಹಗಳು ಹಾಗೂ 1175 ಅಧಿಕಾರಿ (ಎಸ್‌ಐ) ವಸತಿಗೃಹಗಳನ್ನು ನಿರ್ಮಿಸಿ ಹಂಚಿಕೆ ಮಾಡಲಾಗಿದೆ.

**ಪೊಲೀಸ್ ಗೃಹ 2020 ಯೋಜನೆ:**

ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ/70/ಪಿಬಿಎಲ್/2013 ದಿ:22.11.2013 ರ ಆದೇಶದಲ್ಲಿ ಪೊಲೀಸ್ ಗೃಹ 2020 ರ ಯೋಜನೆಯಡಿಯಲ್ಲಿ 11,000 ವಸತಿ ಗೃಹಗಳನ್ನು ನಿರ್ಮಿಸಲು ಮಂಜೂರಾತಿ ನೀಡಲಾಗಿದ್ದು, ಅದರಲ್ಲಿ 10,364 ಸಿಬ್ಬಂದಿ (ಪಿಸಿ) ವಸತಿಗೃಹಗಳು ಹಾಗೂ 634 ಅಧಿಕಾರಿ (ಎಸ್‌ಐ) ವಸತಿಗೃಹಗಳು ಸೇರಿದಂತೆ ಒಟ್ಟು 10,998 ವಸತಿಗೃಹಗಳನ್ನು 3 ಹಂತಗಳಲ್ಲಿ ನಿರ್ಮಿಸಿ ಹಂಚಿಕೆ ಮಾಡಲಾಗಿದೆ.

**ಪೊಲೀಸ್ ಗೃಹ 2025 ಯೋಜನೆ:**

ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ/93/ಪಿಬಿಎಲ್/2020, ದಿ:15.01.2021 ರ ಆದೇಶದಲ್ಲಿ ಪೊಲೀಸ್ ಗೃಹ 2025 ರ ಯೋಜನೆಯಡಿಯಲ್ಲಿ 10,034 ವಸತಿಗೃಹಗಳನ್ನು ನಿರ್ಮಿಸಲು ಮಂಜೂರಾತಿ ನೀಡಿದ್ದು, ಹಂತ–1 ರಲ್ಲಿ 1128 (ಪಿಸಿ) ವಸತಿಗೃಹಗಳು, ಹಂತ–2 ರಲ್ಲಿ 996 (ಪಿಸಿ) ವಸತಿಗೃಹಗಳು ಮತ್ತು ಹಂತ–3 ರಲ್ಲಿ 636 (ಪಿಸಿ) ವಸತಿಗೃಹಗಳನ್ನು ನಿರ್ಮಿಸಲಾಗುತ್ತಿದ್ದು, ಮೊದಲನೇ ಹಂತದಲ್ಲಿ 312 (ಪಿಸಿ) ವಸತಿಗೃಹಗಳ ಕಾಮಗಾರಿಯು ಪೂರ್ಣಗೊಂಡಿದ್ದು, ಹಸ್ತಾಂತರ ಪ್ರಕ್ರಿಯೆಯಲ್ಲಿರುತ್ತದೆ.

ಕರ್ನಾಟಕ ರಾಜ್ಯ ಪೊಲೀಸ್ ವಸತಿ ನಿಗಮ ನಿಯಮಿತ ವತಿಯಿಂದ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರಿಗೆ ನಿವೇಶನಗಳನ್ನು ಹಂಚುವ ಪ್ರಕ್ರಿಯೆ ಇರುವುದಿಲ್ಲ.

ಸಂಖ್ಯೆ: ಒಇ 241 ಪಿಇಎಂ 2023

(ಡಾ॥ ಜಿ. ಪರಮೇಶ್ವರ)
ಗೃಹ ಸಚಿವರು